graduates who seek employment in Government service.

**Sri H. S. RUDRAPPA.**—Are the Government aware that none of these graduates have settled down on lands?

**Sri H. SIDDAVEERAPPA.**—Sir, if they have not done so, it is rather unfortunate. But Government are prepared to make them settle on lands if they are forthcoming.

**Sri H. S. RUDRAPPA.**—May I know Sir, what is the usefulness of such a college otherwise?

**Sri H. SIDDAVEERAPPA.**—Government have thought that it is absolutely necessary in the interest of the agricultural industry in the State.

**Sri H. S. RUDRAPPA.**—Will it not result in waste unless these students who go out of this college employ themselves on land?

**Sri H. SIDDAVEERAPPA.**—If they want to usefully settle on lands, Government will be only too glad to help them.

---

### Police help to Landlords at Kagodu.

*Q.*—202. **Sri S. GOPALA GOWDA** (Sagar-Hosanagar).—Will the Government be pleased to state:—

(*a*) the amount spent towards police help to the landlords at Kagodu in connection with the Satyagraha there?

(*b*) whether any portion of that expenditure was met by the concerned landlords;

(*c*) the period during which the police help was given to the landlords?

*A.*—**Sri H. SIDDAVEERAPPA** (Minister for Home Affairs and Agriculture).—

(*a*) No police help was given to the landlords and hence no amount was spent in this behalf.

(*b*) Does not arise in view of the answer to (*a*).

(*c*) Do do

ಶ್ರೀ ಎಸ್. ಗೋಪಾಲಗೌಡರು.—ಜಮೀನ್ದಾರರಿಗೆ ಪೋಲೀಸಿನವರ ಸಹಾಯವನ್ನು ಒದಗಿಸಲಿಲ್ಲವೆಂದು ಉತ್ತರ ಕೊಟ್ಟಿದೆ. ಪೋಲೀಸಿನವರ ಸಹಾಯವೆಂದರೆ ಏನು ಅರ್ಥಮಾಡಿಕೊಂಡಿದ್ದಾರೆ ಸರ್ಕಾರದವರು ?

**Mr. SPEAKER.**—That question need not be answered.

ಶ್ರೀ ಎಸ್. ಗೋಪಾಲಗೌಡರು.—ಪೋಲೀಸ್ ಸಹಾಯವೆಂದರೇನು ?

**Mr. SPEAKER.**—It is the Hon'ble Member's question and he must know what it is.

ಶ್ರೀ ಎಸ್. ಗೋಪಾಲಗೌಡರು.—ಕಾಗೋಡಿನಲ್ಲಿ ಪೋಲೀಸ್ ಸ್ಟೇಷನ್ ಇದೆಯೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಇಲ್ಲ.

ಶ್ರೀ ಎಸ್. ಗೋಪಾಲಗೌಡರು.—ಆದರೂ ಅಲ್ಲಿ ಪೋಲೀಸಿನವರಿದ್ದುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಬಂದಿದೆ.

ಶ್ರೀ ಎಸ್. ಗೋಪಾಲಗೌಡರು.—ಏಕೆ ಇದ್ದರು?

ಶ್ರೀ ಎಚ್. ಸಿದ್ದವೀರಪ್ಪನವರು.—Law and Order maintain ಮಾಡುವುದಕ್ಕೆ.

ಶ್ರೀ ಎಸ್. ಗೋಪಾಲಗೌಡರು.—ಯಾರ ಶಾಂತಿಯನ್ನು ರಕ್ಷಿಸುವುದಕ್ಕೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಸರ್ಕಾರ ಮತ್ತು ಪ್ರಜೆಗಳಿಗಾಗಿ.

ಶ್ರೀ ಎಸ್. ಗೋಪಾಲಗೌಡರು.—ಯಾವ ಪ್ರಜೆಗಳಿಗಾಗಿ ?

ಶ್ರೀ ಎಚ್. ಸಿದ್ದವೀರಪ್ಪನವರು.—ಆ ಗ್ರಾಮಗಳ ಪ್ರಜೆಗಳಿಗಾಗಿ.

ಶ್ರೀ ಎಸ್. ಗೋಪಾಲಗೌಡರು.—ಅಲ್ಲಿನ ಎಲ್ಲ ಪ್ರಜೆಗೂ ಸಹಾಯಮಾಡುವುದಕ್ಕೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಅಲ್ಲಿನ ಎಲ್ಲ ನಾಗರಿಕ ಪ್ರಜೆಗಳ ಸಹಾಯಕ್ಕಾಗಿ.

ಶ್ರೀ ಎಸ್. ಗೋಪಾಲಗೌಡರು.—ಏಕೆ ಸಹಾಯ ?

**Sri H. SIDDAVEERAPPA.**—Because there was imminent threat to peace and therefore in the interest of maintaining Law and Order the Government were obliged to maintain some police in that place for some time.

ಶ್ರೀ ಎಸ್. ಗೋಪಾಲಗೌಡರು.—ಯಾರು ಅಲ್ಲಿ ಶಾಂತಿಯನ್ನು ಕಲಕಿದವರು ?

ಶ್ರೀ ಎಚ್. ಸಿದ್ದವೀರಪ್ಪನವರು.—ಯಾರು ಶಾಂತಿಯನ್ನು ಕಲಕುವುದಕ್ಕೆ ಪ್ರಯತ್ನಮಾಡಿದರೋ ಅದನ್ನು ತಡೆಗಟ್ಟುವುದಕ್ಕೆ.

ಶ್ರೀ ಎಸ್. ಗೋಪಾಲಗೌಡರು.—ಸರ್ಕಾರಕ್ಕೆ ಯಾರಿಂದ ದೂರು ಬಂದಿತು ?

ಶ್ರೀ ಎಚ್. ಸಿದ್ದವೀರಪ್ಪನವರು.—ಯಾರಿಗೆ ಶಾಂತಿ ಭಂಗವಾಗಿತ್ತೋ ಅವರಿಂದ.

ಶ್ರೀ ಎಸ್. ಗೋಪಾಲಗೌಡರು.—ಅವರ ಹೆಸರೇನು ?

ಶ್ರೀ ಎಚ್. ಸಿದ್ದವೀರಪ್ಪನವರು.—ನೋಟೀಸ್.

ಶ್ರೀ ಎಸ್. ಗೋಪಾಲಗೌಡರು.—ಜಮೀನ್ದಾರರಿಗೆ ಪೋಲೀಸಿನವರ ಸಹಾಯ ಕೊಟ್ಟಿಲ್ಲವೆಂಬ ಉತ್ತರಕ್ಕೆ ಆಧಾರವಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಇದೆ.

ಶ್ರೀ ಎಸ್. ಗೋಪಾಲಗೌಡರು.—ಯಾವ ಜಮೀನ್ದಾರರಿಗೂ ಪೋಲೀಸರ ಸಹಾಯ ಕೊಟ್ಟಿಲ್ಲವೆಂಬುದಕ್ಕೆ ಆಧಾರವಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಇದೆ

ಶ್ರೀ ಬಿ. ನಾರಾಯಣಸ್ವಾಮಿಯವರು (ಮೈಸೂರು ಸಿಟಿ ದಕ್ಷಿಣ).—ಅಲ್ಲಿ ಯಾರಿಂದ ಶಾಂತಿಭಂಗವಾಗುತ್ತಿತ್ತು ?

ಶ್ರೀ ಎಚ್. ಸಿದ್ದವೀರಪ್ಪನವರು.—ಯಾರು ಇನ್ನೊಬ್ಬರ ಜಮೀನಿನ ಮೇರೆ ಪ್ರವೇಶಮಾಡುವುದಕ್ಕೆ ಪ್ರಯತ್ನಮಾಡಿದರೋ ಅವರಿಂದ.

ಶ್ರೀ ಬಿ. ನಾರಾಯಣಸ್ವಾಮಿಯವರು.—ಇಂಥ ವರೇ ಎಂದು ಹೇಳುವುದಕ್ಕಾಗುವುದಿಲ್ಲವೆ ?

ಶ್ರೀ ಎಚ್. ಸಿದ್ಧವೀರಪ್ಪನವರು.—ಹೆಸರನ್ನು ಹೇಳುವುದಕ್ಕೆ ಈಗ ಸಾಧ್ಯವಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು (ಚಿತ್ರದುರ್ಗ).—ಜಮೀನ್ದಾರರಾದ ಒಡೆಯರ ಜಮೀನನ್ನು ಅವರು ಉತ್ತಿರಲಿಲ್ಲವೆ?

Sri H. SIDDAVEERAPPA.—That does not arise.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು.—ರೈತರು ಲ್ಯಾಂಡ್ ರೆವಿನ್ಯೂ ಕೋಡಿನ ಪ್ರಕಾರ ಅವರ ಜಮೀನಿನಲ್ಲಿ ಟೆನೆಂಟ್ಸ್ ಆಗಿ ಕೆಲಸಮಾಡುತ್ತಿದ್ದರೂ ಅಕ್ರಮವಾಗಿ ಅವರಿಗೆ ಸಹಾಯ ಕೊಡಲಿಲ್ಲವೆ?

ಶ್ರೀ ಎಚ್. ಸಿದ್ಧವೀರಪ್ಪನವರು.—ಇಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು.—ಆ ರೀತಿ ಅವರಿಗೆ ಸಹಾಯ ಕೊಟ್ಟು ರೈತರನ್ನು ಅಲ್ಲಿಂದ ಹೊರ ದೂಡಲಿಲ್ಲವೆ?

ಶ್ರೀ ಎಚ್. ಸಿದ್ಧವೀರಪ್ಪನವರು.—ಇಲ್ಲ.

---

## Committee to go into complaints of Police atrocities during Kagodu Satyagraha.

*Q.*—203. Sri S. GOPALA GOWDA (Sagar-Hosanagar).—Will the Government be pleased to state :—

whether they have received complaints of police atrocities during Kagodu Satyagraha and whether they form a Committee to go into the truth or otherwise of such complaints ?

*A.*—Sri H. SIDDAVEERAPPA (Minister for Home Affairs and Agriculture).—There were some stray complaints received by post which on verification by the Department were found not true. None appeared in person and gave complaints.

As the complaints received were found not true on verification and as there is no trouble at Kagodu at present it is not proposed to form any Committee.

ಶ್ರೀ ಎಸ್. ಗೋಪಾಲಗೌಡರು.—ಅಂಚೆಯ ಮೂಲಕ ಬಂದ ದೂರುಗಳನ್ನು ಈ ಸಭೆಯ ಮುಂದಿಡಲಾಗುತ್ತದೆಯೆ ?

Sri H. SIDDAVEERAPPA.—Government do not consider it necessary. Everything is quiet there.

ಶ್ರೀ ಎಸ್. ಗೋಪಾಲಗೌಡರು.—ಈಗ ಯಾವ ತೊಂದರೆಯೂ ಇಲ್ಲ, ಎಲ್ಲವೂ ಸರಿಯಾಗಿದೆಯೆಂದು ಹೇಳಿದೆ. ಎಂದರೆ, ಯಾರಿಗೆ ಅಲ್ಲಿ ತೊಂದರೆಯಾಗುತ್ತಿತ್ತೋ ಅವರಿಗೆ ಸರ್ಕಾರ ಪರಿಹಾರ ದೊರಕಿಸಿದೆಯೆ?

Mr. SPEAKER.—That does not arise.

ಶ್ರೀ ಎಸ್. ಗೋಪಾಲಗೌಡರು.—ಆ ದೂರುಗಳನ್ನು ಯಾರು ಪರಿಶೀಲನೆಮಾಡಿ ನಿಜವಲ್ಲವೆಂದು ತೀರ್ಮಾನ ಮಾಡಿದರು ?

ಶ್ರೀ ಎಚ್. ಸಿದ್ಧವೀರಪ್ಪನವರು.—ಸರ್ಕಾರದವರು.

ಶ್ರೀ ಎಸ್. ಗೋಪಾಲಗೌಡರು.—ಯಾರ ಮುಖಾಂತರ ?

ಶ್ರೀ ಎಚ್. ಸಿದ್ಧವೀರಪ್ಪನವರು.—ಅಧಿಕಾರಿಗಳ ಮೂಲಕ.

ಶ್ರೀ ಎಸ್. ಗೋಪಾಲಗೌಡರು.—ಕಾಗೋಡಿನಲ್ಲಿ ಈಗ ಪರಿಸ್ಥಿತಿ ಪೂರ್ಣವಾಗಿ ಸರಿಯಾಗಿದೆಯೆಂದು ಯಾರಾದರೂ ವರದಿ ಮಾಡಿದ್ದಾರೆಯೆ ?

ಶ್ರೀ ಎಚ್. ಸಿದ್ಧವೀರಪ್ಪನವರು.—ಹೌದು.

ಶ್ರೀ ಎಸ್. ಗೋಪಾಲಗೌಡರು.—ಯಾರಿಂದ ವರದಿ ಬಂದಿದೆ ?

ಶ್ರೀ ಎಚ್. ಸಿದ್ಧವೀರಪ್ಪನವರು.—ಜಿಲ್ಲಾಧಿಕಾರಿಗಳಿಂದ.

---

## Indian Motor Vehicles Act of 1939.

*Q.*—249. Sri Mulka GOVINDA REDDY (Chitaldrug).—Will the Government be pleased to state :—

(a) when the Indian Motor Vehicles Act of 1939 came into force in the State ;

(b) whether it will be given retrospective effect from April 1951 ?

*A.*—Sri H. SIDDAVEERAPPA (Minister for Home Affairs and Agriculture).—

(a) From 1st April 1951.

(b) *Vide* reply to (a) above.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು.—1951 ನೆಯ ಇಸವಿ ಏಪ್ರಿಲ್ ಒಂದರಿಂದ ಯಾವ ಕಾರ್ಯಕ್ರಮ ನಡೆದಿದ್ದರೂ ಕೂಡ ಅದು ಕಾನೂನು ಪ್ರಕಾರ ನಡೆಯದೇಯಿದ್ದರೆ ಆರೀತಿ ನಡೆಸುವುದಕ್ಕೆ ಅವಕಾಶ ಕೊಡುತ್ತೀರಾ ?

ಶ್ರೀ ಎಚ್. ಸಿದ್ಧವೀರಪ್ಪನವರು.—That is a matter of opinion. ಎಲ್ಲಾ ಕಾನೂನು ಪ್ರಕಾರ ನಡೆದಿವೆಯೇ ವಿನಾ ಕಾನೂನು ಬಿಟ್ಟು ನಡೆದಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು.—1-4-51 ಎಂದರೆ ತಾವು ಅಧಿಕಾರಕ್ಕೆ ಬಂದಮೇಲೆ ಜಾರಿಗೆ ಕೊಟ್ಟಿದ್ದೀರಿ, ಅದಕ್ಕೆ ಮೊದಲು ಕೊಟ್ಟಿಲ್ಲವೆಂಬುದು ಗೊತ್ತಿದೆಯೆ ?

Sri H. SIDDAVEERAPPA.—The Act was in force from 1st April 1951.

Sri Mulka GOVINDA REDDY.—It was not in operation. The Hon'ble Minister knows it, is it not ?

Sri H. SIDDAVEERAPPA.—Only particular parts of it were not in operation. But the Act was in force.

---